O.S. 367/2013 DW-2

ದಿನಾಂಕಃ 08.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃ 4ನೇ ಪ್ರವಾದಿ ಪರ ವಕೀಲರಿಂದಃ</u>**

ನಾನು 4 ನೇ ತರಗತಿಯವರೆಗೆ ವಿದ್ಯಾಬ್ಯಾಸ ಮಾಡಿದ್ದು, ಕನ್ನಡ ಒದಲು ಬರುತ್ತದೆ. ನಮ್ಮ ತಂದೆಯವರಿಗೆ 6 ಜನ ಮಕ್ಕಳು. ನನ್ನ ಮಗಳು ನಂದಿನಿಯ ವಿದ್ಯಾಭ್ಯಾಸ ದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಒಟ್ಟು 4 ಎಕರೆ 26 ಗುಂಟೆ ಇರುತ್ತದೆ. ಅದರ ಚಕ್ಕುಬಂದಿಃ ಪೂಃ ಮತ್ತು ಪಃ ಸರ್ಕಾರಿ ಹಳ್ಳ, ದಃ ಬಾಳಯ್ಯರವರ ಜಮೀನು. ದಾವಾ ಸ್ವತ್ತಿನ ಪೂರ್ವಕ್ಕೆ ಈರಯ್ಯ ಮತ್ತು ಚಿಕ್ಕಣ್ಣ ರವರ ಜಮೀನು ಎಂದರೆ ಸಾಕ್ಷಿ ಈ ಮಧ್ಯ ಅಗಿರಬಹುದು ಎಂದು ನುಡಿಯುತ್ತಾರೆ. ನೀವು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

4ನೇ ಪ್ರವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಪ್ರಕರಣವನ್ನು ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಶಿರಾ.